ಹುಬ್ಬಳ್ಳಿಯಲ್ಲಿರುವ ಸಕ್ಕರೆ ಕಾರ್ಖಾನೆಯ ಹತ್ತಿರ ರಾಜ್ಯ ರಸ್ತೆ ಸಾರಿಗೆಯ ಬಸ್ ನಿಲ್ದಾಣ.

3330 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿರುವ ಮುಗಟಖಾನ ಹುಬ್ಬಳ್ಳಿಯಲ್ಲಿರುವ ಸಕ್ಕರೆ ಕಾರ್ಖಾನೆಯ ಹತ್ತಿರ (ಬೈ ಪಾಸ್ ರೋಡ್ ಹತ್ತಿರ) ರಾಜ್ಯ ರಸ್ತೆ ಸಾರಿಗೆಯ ಬಸ್ ನಿಲ್ದಾಣದ ಅಗತ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಬಸ್ ನಿಲ್ದಾಣದ ನಿರ್ಮಾಣ ಮಾಡಲು ಕೈಗೊಂಡು ಕ್ರಮವೇನು?

ಇ) ಸಕ್ಕರೆ ಕಾರ್ಖಾನೆಯವರು ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಸ್ಥಳವನ್ನು ಕೊಡಲು ಒಪ್ಪಿಗೆ ನೀಡಿದ್ದರೂ ಕೂಡ ಇದುವರೆವಿಗೂ, ಅಲ್ಲಿ ನಿರ್ಮಾಣದ ಕಾರ್ಯವು ಪ್ರಾರಂಭವಾಗದಿರಲು ಕಾರಣವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಬಂದಿದೆ.

ಆ) ಮಂಡಲ್ ಪಂಚಾಯಿತಿಯವರನ್ನು ಒಂದು ಎಕರೆ ಜಮೀನು ಕೊಡಲು ಕೋರಲಾಗಿದೆ.

ಇ) ಭೂಮಿ ದೊರೆತ ನಂತರ ಈ ಕೆಲಸವನ್ನು ಪ್ರಾರಂಭಿಸಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ

3373 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಐ.ಪಿ. ಸೆಟ್ಟುಗಳಿಗೆ ಎಷ್ಟು ವಿದ್ಯುಚ್ಛಕ್ತಿ ಕೊಡಬೇಕೆಂದು ನಿರ್ಧರಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಬೆಳಗಾಂ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಂಪರ್ಕವನ್ನು ಕೊಡಬೇಕೆಂದು ನಿರ್ಧರಿಸಲಾಗಿದೆ. (ತಾಲ್ಲೂಕು ವಿವರಗಳನ್ನು ನೀಡುವುದು)

ಇ) ಏಪ್ರಿಲ್ ತಿಂಗಳಿಂದ ಜುಲೈ ಅಂತ್ಯದವರೆಗೆ ಎಷ್ಟು ಐ.ಪಿ. ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ಪ್ರತಿಯೊಂದು ತಾಲ್ಲೂಕಿನಲ್ಲಿ ಕೊಡಲಾಗಿದೆ. ಮತ್ತು ಬೆಳಗಾಂ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನ ಈ ವರ್ಷದ ಗುರಿ ಎಷ್ಟು?

ಈ) ಬೈಲಹೊಂಗಲ ವಿದ್ಯುತ್ ಮಂಡಳಿಯ ಸಹಾಯಕ ಕಾರ್ಯಕಾರಿ ಅಭಿಯಂತರ (ವಿ) ರವರ ಉಪಯೋಗಕ್ಕಾಗಿ ಇವರಿಗೆ ಜೀಪು ಮತ್ತು ಲಾರಿಗಳು ಇಲ್ಲದೇ ಇರುವುದರಿಂದ ಐ.ಪಿ. ಸೆಟ್ ಸಂಪರ್ಕ ಕೊಡಲು ಅತಿ ವಿಳಂಬವಾಗುತ್ತಿರುವ ಸಂಗತಿ ನಿಜವೇ? ಹಾಗಿದ್ದಲ್ಲಿ ಈ ವಾಹನಗಳನ್ನು ಒದಗಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಉ) ಬೈಲಹೊಂಗಲ ಸಬ್ -ಡಿವಿಷನ್‌ನಲ್ಲಿ ಸುಟ್ಟು ಹೋಗಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು? ಅವು ಸುಟ್ಟು ಹೋಗಿ ಎಷ್ಟು ದಿನಗಳಾಗಿರುತ್ತವೆ? ಈ ವಿಭಾಗದಲ್ಲಿ ಒಂದು ತಿಂಗಳಿನಿಂದ ವಿದ್ಯುತ್ ಇಲ್ಲದೆ ಇರುವ ಸಂಗತಿ ನಿಜವೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) ಈ ವರ್ಷ 60,160 ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ಧೀಕರಣದ ಗುರಿ ಹಾಕಿಕೊಂಡಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಹುಕ್ಕೇರಿ ತಾಲ್ಲೂಕನ್ನು ಹೊರತು ಪಡಿಸಿ ಈ ವರ್ಷ 6,500 ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ಧೀಕರಿಸಲು ಗುರಿಯನ್ನು ನಿಗದಿ ಪಡಿಸಿದೆ. ಹುಕ್ಕೇರಿ ತಾಲ್ಲೂಕಿನಲ್ಲಿ ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ನೀರಾವರಿ ಸಂಪು ಸೆಟ್ಟುಗಳ ವಿದ್ಯುದ್ಧೀಕರಣವನ್ನು ಮಾಡುತ್ತವೆ. ಇನ್ನಿತರ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಈ(1991-92)ನೇ ವಿದ್ಯುದ್ಧೀಕರಣಕ್ಕೆ ನಿಗದಿ ಪಡಿಸಿರುವ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ
1.	ಅಥಣಿ	1,100
2.	ಬೆಳಗಾವಿ	600
3.	ಚಿಕ್ಕೋಡಿ	1,000
4.	ಗೋಕಾಕ್	1,000
5.	ಖಾನಾಪುರ	400
6.	ಸವದತ್ತಿ	650
7.	ರಾಯಭಾಗ	700
8.	ರಾಮದುರ್ಗ	400
9.	ಬೈಲಹೊಂಗಲ	650

ಇ) ಏಪ್ರಿಲ್ 1991ರಿಂದ ಜುಲೈ 1991ರ ಅಂತ್ಯದವರೆಗಿನ ತಾಲ್ಲೂಕುವಾರು ಸಾಧನೆಯ ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ತಾಲ್ಲೂಕು	ಗುರಿ (1991-92)	ವಿದ್ಯುತ್ (ಸಂಪರ್ಕ ನೀಡಲಾದ ನೀರಾವರಿ ಪಂಪು ಸೆಟ್ಟುಗಳ ಸರಾಸರಿ (ಏಪ್ರಿಲ್ 1991ರಿಂದ ಜುಲೈ 91ರವರೆಗೆ)

1. ಬೆಳಗಾವಿ	600	54
2. ಖಾನಾಪುರ	400	92
3. ಬೈಲಹೊಂಗಲ	650	63
4. ಸವದತ್ತಿ	650	24
5. ರಾಮದುರ್ಗ	400	17
6. ಚಿಕ್ಕೋಡಿ	1,000	181
7. ಅಥಣಿ	1,100	119
8. ರಾಯಭಾಗ	700	192
9. ಗೋಕಾಕ್	1,000	104
10. ಹುಕ್ಕೇರಿ		136

(ಹುಕ್ಕೇರಿ ತಾಲ್ಲೂಕು ಗ್ರಾಮೀಣ ಸಹಕಾರ ಸಂಘವು ವಿದ್ಯುದ್ದೀಕರಣದ ಕಾರ್ಯವನ್ನು ನಿರ್ವಹಿಸುತ್ತಿದೆ.

ಈ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬೈಲಹೊಂಗಲ ಉಪ - ವಿಭಾಗದಲ್ಲಿ ಹಾಲಿ ಜೀಪ್ ಇಲ್ಲಿದಿರುವುದು ನಿಜ. ಆದರೆ ಒಂದು ಲಾರಿ ಖಾಯಂ ಆಗಿ ಈ ಉಪ ವಿಭಾಗಕ್ಕೆ ನೀಡಲಾಗಿದ್ದು ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣದಲ್ಲಿ ವಿಳಂಬವಾಗುತ್ತಿಲ್ಲ.

ಉ) ಈ ಸಾಲಿನಲ್ಲಿ ಏಪ್ರಿಲ್ 1991ರಿಂದ ಜುಲೈ 1991ರ ಅಂತ್ಯದವರೆಗೆ ಬೈಲಹೊಂಗಲ ಉಪ ವಿಭಾಗದಲ್ಲಿ ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರುಗಳ ಒಟ್ಟು ಸಂಖ್ಯೆ 92. ಇವುಗಳಲ್ಲಿ 85 ಟ್ರಾನ್ಸ್‌ಫಾರ್ಮರ್‌ಗಳು ಬಹಳ ಹಿಂದೆ ವಿಫಲಗೊಂಡಿದ್ದು ಹೊಸ ಟ್ರಾನ್ಸ್‌ಫಾರ್ಮರುಗಳನ್ನು ಹಾಕಿದೆ. ಮಿಕ್ಕುಳಿದ ಏಳು ಟ್ರಾನ್ಸ್‌ಫಾರ್ಮರುಗಳ ಇತ್ತೀಚಿಗಷ್ಟೆ ವಿಫಲ ಗೊಂಡಿದ್ದು, ಹೊಸ ಟ್ರಾನ್ಸ್‌ಫಾರ್ಮರುಗಳನ್ನು ಹಾಕಲು ಕ್ರಮ ಕೈಗೊಂಡಿದೆ. ಒಂದು ತಿಂಗಳಿನಿಂದಲೂ ಈ ಉಪ ವಿಭಾಗದಲ್ಲಿ ವಿದ್ಯುತ್ ಇಲ್ಲ ಎನ್ನುವ ಸಂಗತಿ ನಿಜವಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಈ ಸಾಲಿನಲ್ಲಿ ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ ನಿಗದಿ ಪಡಿಸಿರುವ ಗುರಿ
1.	ಬೆಂಗಳೂರು	7,125
2.	ಬೆಳಗಾವಿ(ಹುಕ್ಕೇರಿ ತಾಲ್ಲೂಕನ್ನು ಹೊರತುಪಡಿಸಿ)	6,500
3.	ಬಳ್ಳಾರಿ	2,300
4.	ಬೀದರ್	1,600
5.	ಬಿಜಾಪುರ	5,200
6.	ಚಿಕ್ಕಮಗಳೂರು	1,200

7. ಚಿತ್ರದುರ್ಗ	3,400
8. ದಕ್ಷಿಣ ಕನ್ನಡ	4,600
9. ಧಾರವಾಡ	2,500
10. ಗುಲ್ಬರ್ಗಾ	2,000
11. ಹಾಸನ	3,050
12. ಕೊಡಗು	150
13. ಕೋಲಾರ	2,700
14. ಮಂಡ್ಯ	1,960
15. ಮೈಸೂರು	2,700
16. ರಾಯಚೂರು	3,100
17. ಶಿವಮೊಗ್ಗ	2,000
18. ತುಮಕೂರು	6,675
19. ಉತ್ತರ ಕನ್ನಡ	1,400
ಒಟ್ಟು	60,160

ಉಡುಪಿ ತಾಲ್ಲೂಕು ಕೆಮ್ಮಣ್ಣು ಸರ್ಕಾರಿ ಪದವಿ ಕಾಲೇಜಿನ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕರ ಹುದ್ದೆ

3317 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಕೆಮ್ಮಣ್ಣು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕರ ಹುದ್ದೆ ಖಾಲಿ ಇದೆಯೇ?

ಆ) ಇದ್ದಲ್ಲಿ ಎಷ್ಟು ಸಮಯದಿಂದ ಖಾಲಿ ಇದೆ?

ಇ) ಈ ಸಲದ ಸಾಮಾನ್ಯ ವರ್ಗಾವಣೆಯ ಸಂದರ್ಭದಲ್ಲಿ ಆ ಹುದ್ದೆಗಳನ್ನು ಶಿಕ್ಷಣಾರ್ಥಿಗಳ ಹಿತದೃಷ್ಟಿಯಿಂದ ಭರ್ತಿ ಮಾಡುವಂತೆ ಸಾರ್ವಜನಿಕರಿಂದ ಮನವಿ ಬಂದಿರುವುದೆ?

ಈ) ಹಾಗಿದ್ದಲ್ಲಿ ಅದನ್ನು ಭರ್ತಿ ಮಾಡಲಾಗಿದೆಯೆ?

ಉ) ಮಾಡದಿದ್ದಕ್ಕೆ ಅದಕ್ಕೆ ಕಾರಣವೇನು?

ಊ) ಈ ಕುರಿತು ಜನರ ಆಕ್ರೋಶ ತಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಬಂದಿದ್ದಲ್ಲಿ ಎಷ್ಟು ಸಮಯದಲ್ಲಿ ಅದನ್ನು ಭರ್ತಿ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರ ಸಚಿವರು) :

ಅ) ಖಾಲಿ ಇರುವುದಿಲ್ಲ.